

ನಾಗಶಂಕರ ಮಂದಿರದ ಹಿಂದಿನ ಕೊಳದಲ್ಲಿರುವ ಆಮೆಗಳು



ಸಂಭ್ರಮದ ವಾತಾವರಣ. ಶಿವ ಹಾಗೂ ದೇಗುಲಕ್ಕೆ ಸಂಬಂಧಿಸಿದ ಹಾಡು, ನಾಟಕಗಳ ಪ್ರದರ್ಶನವೂ ಇರುತ್ತದೆ. ಹರಕೆ ತೀರಿಸಲು ಈಶಾನ್ಯ ರಾಜ್ಯಗಳ ಭಕ್ತಾದಿಗಳು ಹಬ್ಬದ ಆಸುಪಾಸು ಬರುತ್ತಲೇ ಇರುತ್ತಾರೆ.

## ಮತ್ಸ್ಯ ಸಂಕುಲದ ತಾಣ

ದೇವಸ್ಥಾನಕ್ಕೆ ಹೊಂದಿಕೊಂಡಂತೆ ಹಿಂದಿನ ಭಾಗದಲ್ಲಿ ವಿಶಾಲ ಕೊಳವಿದೆ. ಇದರ ವಿಸ್ತೀರ್ಣ, ಒಂದೂಕಾಲು ಲಕ್ಷ ಚದರಡಿ ಮತ್ತು ಆಳ ಹದಿನೈದು ಅಡಿ. ದೇವಸ್ಥಾನಕ್ಕೆ ಭೇಟಿ ನೀಡುವ ಜನರಿಗೆ ಇದು ಮತ್ತೊಂದು ಆಕರ್ಷಣೀಯ ತಾಣ. ಅರ್ಧ ಅಡಿಯಿಂದ ಹಿಡಿದು ನಾಲ್ಕು ಅಡಿ ಉದ್ದದ ಬೃಹತ್ ಗಾತ್ರದ ಆಮೆಗಳು ಇಲ್ಲಿದ್ದು, ನೋಡುಗರಿಗೆ ಮತ್ತಷ್ಟು ಮುದ ನೀಡುತ್ತವೆ.

'ನೂರಾರು ವರ್ಷಗಳಿಂದಲೂ ಇದು ಆಮೆಗಳ ಆವಾಸಸ್ಥಾನವಾಗಿದೆ. ನಮ್ಮದು ಪಕ್ಕದ ಹಳ್ಳಿ. ನಮ್ಮ ಅಜ್ಜ ಇಲ್ಲಿ ವಾರಕ್ಕೆ ಎರಡು ಸಲ ಬಂದು, ಆಮೆಗಳಿಗೆ ಆಹಾರ ಹಾಕಿ ಹೋಗುತ್ತಿದ್ದರು. ನಮ್ಮ ಅಜ್ಜನ ಆಮೆ ಪ್ರೀತಿ ಗಮನಿಸಿದ್ದ ಹಳ್ಳಿಗರು, ತಮ್ಮ ಹೊಲದ ಉತ್ಪನ್ನಗಳನ್ನು ಅಜ್ಜನಿಗೆ ಒಯ್ದು ಕೊಡುತ್ತಿದ್ದರಂತೆ. ಅದನ್ನು ಆಮೆಗಳಿಗೆ ತಂದು ಹಾಕುತ್ತಿದ್ದ ಕೆಲಸವನ್ನು ಅವರು ಸುಮಾರು ಐವತ್ತು ವರ್ಷಗಳವರೆಗೆ ತಪ್ಪದೇ ನಿರ್ವಹಿಸಿದರು' ಎಂದು ದೇಗುಲ ಆವರಣದ ಮಳಿಗೆಯ ಮಾಲೀಕ ಹೃಷಿಕೇಶ ನೆನಪಿಸಿಕೊಳ್ಳುತ್ತಾರೆ.

ಗಟ್ಟಿ ಕವಚಕ್ಕೆ (ಚಿಪ್ಪು) ಹೋಲಿಸಿದರೆ, ಮೃದು ಕವಚದ ಆಮೆಗಳ ಸಂಖ್ಯೆ ಇಲ್ಲಿ ಹೆಚ್ಚು. ಒಟ್ಟಾರೆ ಸುಮಾರು ಒಂದೂವರೆ ಸಾವಿರ ಆಮೆಗಳ ಪೈಕಿ ಸಾವಿರಕ್ಕೂ ಹೆಚ್ಚು ಆಮೆಗಳದ್ದು ಮೃದು ಕವಚ.

## ಸ್ನೇಹಮಯ ಆಮೆಗಳು

ಆಮೆಗಳು ಸ್ವಭಾವತಃ ಅಪಾಯಕಾರಿ ಅಲ್ಲ. ಅವುಗಳ ನಿಧಾನಚಲನೆಯೇ ಆಕರ್ಷಕ. ನಾಗಶಂಕರ ಮಂದಿರದ ಕೊಳದಲ್ಲಿನ ಆಮೆಗಳ ಗಾತ್ರವೂ ವೈವಿಧ್ಯಮಯ. ಚಿಕ್ಕವು ಒಂದಷ್ಟು; ಮಣಭಾರದ ಚಿಪ್ಪು ಹೊತ್ತು ಸಾಗುವ ಬೃಹತ್ ಗಾತ್ರದ ಆಮೆಗಳೇ ಅಧಿಕ.

ನೀರಿನೊಳಗೆ 'ಅಡಗಿರುವ' ಆಮೆಗಳನ್ನು ಹತ್ತಿರಕ್ಕೆ ಕರೆಯಲು ಸುಲಭ ವಿಧಾನವನ್ನು ಕೊಳದ ನಿರ್ವಾಹಕ ಸಿಬ್ಬಂದಿಯೇ ಹೇಳಿಕೊಡುತ್ತಾರೆ. ಅದು, ಕುರುಕಲು ತಿಂಡಿ ಅಥವಾ ಒಣಮೀನು ತುಣುಕುಗಳನ್ನು ದಡದಲ್ಲಿ ನಿಂತು ಎಸೆಯುವುದು.

ಇಲ್ಲಿನ ಆಮೆಗಳಿಗೆ ಈ ವಿಧಾನ ಎಷ್ಟು ರೂಢಿಯಾಗಿದೆ ಎಂದರೆ, ಕೊಳದ ಮೂಲೆಯಲ್ಲಿ ಯಾರಾದರೂ ಇಳಿಯುತ್ತಿದ್ದರೆ, ನಿಧಾನವಾಗಿ ಅತ್ತ ಮೆಲ್ಲಗೆ ಬಂದುಬಿಡುತ್ತವೆ! ಈ ತಿನಿಸುಗಳನ್ನು ಮಾರಾಟ ಮಾಡುವ ಅಂಗಡಿಗಳು ದೇಗುಲದ ಹೊರಭಾಗದಲ್ಲಿವೆ. ತಿನಿಸುಗಳ ಪಾಕೆಟ್ ಹಿಡಿದು, ನೀರಿನತ್ತ ಬರುತ್ತಲೇ, ಭಾರಿ ಗಾತ್ರದ ಆಮೆಗಳು ಚೋಟುದ್ದದ ಮುಖ ಆ ಕಡೆ ಈ ಕಡೆ ಆಡಿಸುತ್ತ ಬರುತ್ತವೆ. ಇವು ಸ್ನೇಹಪರ. ಆದರೆ ಅವುಗಳ ಬಾಯಿಗೆ ತಿನಿಸು ಇಟ್ಟು ಫೋಟೊ ತೆಗೆಸಿಕೊಳ್ಳುವ ಹುಮ್ಮಸ್ಸಿನಲ್ಲಿ ಕಚ್ಚಿಸಿಕೊಳ್ಳುವ ಸಾಧ್ಯತೆಯೂ ಇದೆ!

## ಅಧ್ಯಯನಕ್ಕೂ ಸೈ

ಭಾರತ ಹಾಗೂ ಬಾಂಗ್ಲಾದೇಶದ ನದಿಗಳಲ್ಲಿ ಕಂಡುಬರುವ ಹಲವು ಪ್ರಭೇದದ ಆಮೆಗಳು ಇಲ್ಲಿವೆ. ಬ್ರಹ್ಮಪುತ್ರ ನದಿಯಲ್ಲಿ ಮೊದಲೆಲ್ಲ ವಿಶಿಷ್ಟ ಪ್ರಭೇದದ ಲಕ್ಷಾಂತರ ಸಂಖ್ಯೆಯ ಆಮೆಗಳಿದ್ದು, ಹಲವು ಕಾರಣಗಳಿಂದಾಗಿ ಇತ್ತೀಚೆಗೆ ಆ ಸಂಖ್ಯೆ ಕಡಿಮೆಯಾಗಿದೆ. ಅವುಗಳ ಪೈಕಿ, ಅವನತಿಯ ಅಂಚಿನಲ್ಲಿ ಇರುವ ತಳಿಗಳ ಆಮೆಗಳನ್ನು ತಂದು ಮೊದಲಿಗೆ ಈ ಕೊಳದಲ್ಲಿ ಬಿಡಲಾಗುತ್ತದೆ. ಅವು ಮೊಟ್ಟೆಯಿಟ್ಟು ಮರಿ ಮಾಡಿದ ಬಳಿಕ, ಆ ಮರಿಗಳನ್ನು ಜತನದಿಂದ ಒಯ್ದು ಅವುಗಳ ಆವಾಸಸ್ಥಾನಕ್ಕೆ ಬಿಡಲಾಗುತ್ತಿದೆ. ಈ ಪ್ರಕ್ರಿಯೆ ಕಳೆದ ಒಂದೂವರೆ ದಶಕದಿಂದ ಚಾಲ್ತಿಯಲ್ಲಿದೆ.

ಈ ಕೊಳದಲ್ಲಿನ ಆಮೆಗಳನ್ನು ನೋಡಲು ನಿತ್ಯ ನೂರಾರು ಪ್ರವಾಸಿಗರು ಬರುತ್ತಾರೆ. ಆಮೆಗಳ ಅಧ್ಯಯನ ಮಾಡುವವರಿಗೂ ಇದು ಅಚ್ಚುಮೆಚ್ಚಿನ ತಾಣ.

ಆಮೆಗಳ ಪ್ರಭೇದ ಹಾಗೂ ಸಂಖ್ಯೆಯನ್ನು ಪ್ರತಿ ವರ್ಷ ಕ್ರಮಬದ್ಧವಾದ ಅಧ್ಯಯನ ಹಾಗೂ ವಿಶ್ಲೇಷಣೆಯೊಂದಿಗೆ ಲೆಕ್ಕ ಹಾಕಲಾಗುತ್ತದೆ.